ದಿನಾಂಕಃ **07.08.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎಸ್ ಆರ್ ವಕೀಲರಿಂದಃ-

ಎಲ್ ಸಿ ರವೀಂದ್ರಕುಮಾರ್ ರವರು ವಾದಿಗಳ ಹೆಸರಿಗೆ ಮಾಡಿದ ಕ್ರಯಪತ್ರದಂತೆ ಅವರ ಹೆಸರಿನಲ್ಲಿ ಖಾತೆ ಇದ್ದು ಋಣಬಾರ ರಾಹಿತ್ಯ ಪತ್ರದಲ್ಲೂ ನಮೂದಾಗಿರುತ್ತದೆ ಎಂದರೆ ಸರಿ. ವಾದಿಗಳು ಕ್ರಯಪತ್ರದಂತೆ ಸ್ವಾದೀನ ಹೊಂದಿರುತ್ತಾರೆ ಎಂದರೆ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಕ್ರಯಕ್ಕೆ ಆಸ್ತಿಯನ್ನು ಕೊಳ್ಳುವ ಪೂರ್ವದಲ್ಲಿ ಅಳತೆ ಮಾಡಿಸಿದಾಗ ನೀವು ಹಾಜರಿದ್ದಿರಾ ಎಂದರೆ ಸಾಕ್ಷಿ ಅವರು ಅಳತೆ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಹಾಜರುಪಡಿಸಿರುವ ದಾಖಲೆಗಳನ್ನು ನಾನು ತಿಳಿದುಕೊಂಡಿರುತ್ತೇನೆ. ವಾದಿಗಳು ಜೆ ಡಿ ಚಾವ್ಲ ರವರಿಂದ ದಾವಾ ಆಸ್ತಿಯ ಮಾಲೀಕರು ಯಾರು ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಜೆ ಡಿ ಚಾವ್ಲ ಗಿಂತ ಪೂರ್ವದಲ್ಲಿ ದಾವಾ ಆಸ್ತಿಯು ಯಾರ ಹೆಸರಿಗೆ ಇತ್ತು ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ

ಸಾಕ್ಷಿ ಮುಂದುವರೆದು ಆ ಬಗ್ಗೆ ನನ್ನ ತಂದೆಗೆ ಮಾಹಿತಿ ಇರಬಹುದು ಎಂದು ನುಡಿಯುತ್ತಾರೆ. ವಾದಿಗಳ ಆಸ್ತಿಯ ಉತ್ತರ ದಿಕ್ಕಿಗೆ ನಮ್ಮಗಳ ಆಸ್ತಿ ಇರುತ್ತದೆ. ವಾದಿಗಳ ಚಕ್ಕುಬಂಧಿ ಸರಿ ಇಲ್ಲಾ ಎಂದು ಸಕ್ಷಮ ಪ್ರಾಧಿಕಾರದಲ್ಲಿ ನಾವು ಪ್ರಶ್ನೆ ಮಾಡಿರುವುದಿಲ್ಲ.

ನಮ್ಮ ಆಸ್ತಿಯ ಚಕ್ಕುಬಂಧಿಯನ್ನು ಈ ದಾವೆಯ ಪ್ರತಿವಾದ ಪತ್ರದಲ್ಲಿ ನಮೂದಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಅದನ್ನು ನಮ್ಮ ತಂದೆ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಅನ್ಯಕ್ರಾಂತ ಮಾಡಿಸಿದ ಬಗ್ಗೆ ಮೂಲ ಪತ್ರಗಳ ಬಗ್ಗೆ ನನಗೆ ಮಾಹಿತಿ ಇಲ್ಲಾ. ದಾವಾ ಆಸ್ತಿಯ ಅಸಸ್ಮೆಂಟ್ ಸಂಖ್ಯೆ 1977ಃ3, 1914ಃ3 ಈ ಆಸ್ತಿಯ ಪೂರ್ಣ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮ ಭಾಗಕ್ಕೆ ಕೆ ಎಂ ರಸ್ತೆ ಬರುತ್ತದೆ. ಮೂರು ಆಸ್ತಿಗಳ ಪಶ್ಚಿಮ ಭಾಗಕ್ಕೆ ಕೆ ಎಂ ರಸ್ತೆ ಬರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಚಕ್ಕುಬಂಧಿ ಪ್ರಮಾಣಪತ್ರವನ್ನು ತಂದು ಹಾಜರುಪಡಿಸಿರುವುದಿಲ್ಲ. ಅಸಸ್ಮೆಂಟ್ ಸಂಖ್ಯೆ 1977ಃ3, 1914ಃ3 ರ ಹಳೇ ಸರ್ವೆ ನಂ 198ಃ3 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆಯ ಹಿಂಭಾಗದಲ್ಲಿ ದಾವಾ ಆಸ್ತಿ ಬರುತ್ತದೆ ಎಂದರೆ ಸರಿ. ಅದರ ನಡುವೆ ಒಂದು ಬೇಲಿ ಇತ್ತು ಎಂದರೆ ಸರಿ. ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವಾಗ ವಾದಿಗೆ ಸೇರಿದ ಜಾಗದಲ್ಲಿ ಶೆಡ್ ಕಟ್ಟಿರುತ್ತೀರಿ ಎಂದರೆ ಸಾಕ್ಷಿ ನಮ್ಮ ಜಾಗದಲ್ಲಿ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಶೆಡ್ ನ್ನು ನಿರ್ಮಿಸಿ ಎರಡು ವರ್ಷಗಳಾಗಿರಬಹುದು ಎಂದರೆ ಅದಕ್ಕಿಂತಲೂ ಪೂರ್ವದಲ್ಲೇ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನನ್ನ ತಂದೆ ಮತ್ತು ತಾಯಿ ಇಬ್ಬರೂ ಪಕ್ಷಗಾರರು ಎಂದರೆ ಸರಿ. ನನ್ನ ತಾಯಿಯವರು ಆರೋಗ್ಯವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾಯಿಗೆ ಶಸ್ತ್ರಚಿಕಿತ್ಸೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾವು ನಮ್ಮ ಆಸ್ತಿಯನ್ನು ಅಳತೆ ಮಾಡಿಸಿರುತ್ತೇವೆ. ನಮ್ಮ ಆಸ್ತಿಯಲ್ಲದೇ ಬೇರೆಯವರ ಆಸ್ತಿಯನ್ನು ಅಳತೆ ಮಾಡಿಸಿರುವುದಿಲ್ಲ. ನಾವು ಖಾಸಗಿ ಸರ್ವೆಯರ್ ಮೂಲಕ ನಮ್ಮ ದಾಖಲಾತಿಗೋಸ್ಕರ ಅಳತೆ ಮಾಡಿಸಿರುತ್ತೇವೆ. ನಮ್ಮ ಆಸ್ತಿಯ ಉತ್ತರ ದಕ್ಷಿಣಕ್ಕೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿ ಒಟ್ಟು 308x280+120 /2 ಇರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ಯಾವ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಶೋಭಾ ಗೌತಮ್ಮ ರವರ ಆಸ್ತಿ ದಾವಾ ಆಸ್ತಿಯ ಯಾವ ಭಾಗಕ್ಕೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳ ಮೂಲ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ ಎಂದರೆ ಸಾಕ್ಷಿ ಚಾವ್ಲಾ ರವರ ದಾಖಲೆಗಿಂತ ಪೂರ್ವದ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 24.09.2015 ರಂದು ದಾವಾ ಆಸ್ತಿಯ ತಿದ್ದುಪಡಿ ಪತ್ರವನ್ನು ಜೆ ಡಿ ಚಾವ್ಲ ರವರು ಎಲ್ ಸಿ ರವೀಂದ್ರಕುಮಾರ್ ರವರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-7 ರಲ್ಲಿ ಚಕ್ಕುಬಂಧಿ ಸರಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ದಾವೆ ವಿಚಾರಣೆ ಹಂತದಲ್ಲಿರುವಾಗ ನನ್ನ ತಂದೆ ತಾಯಿಗಳು ಪುರಸಭೆಗೆ ಅಳತೆ ಸರಿಪಡಿಸಿಕೊಡುವಂತೆ ಅರ್ಜಿ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒಂದು ಬಾರಿ ಅಸಸ್ಮೆಂಟ್ ನಂಬರ್ ತಿದ್ದುಪಡಿ ಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 09.01.2022 ರಂದು ವಾದಿ ಮತ್ತು ಪ್ರತಿವಾದಿಗಳ ನಡುವೆ ಪೋಲಿಸು ಕೇಸುಗಳು ದಾಖಲಾಗಿದ್ದವು ಎಂದರೆ ಸರಿ. ವಾದಿಗಳು ದಾವಾ ಆಸ್ತಿಯನ್ನು ಅಳತೆ ಮಾಡಿಸಿ ನಗರಾಭಿವೃದ್ಧಿ ಪ್ರಾದಿಕಾರದ ನೀಲಿ ನಕಾಶೆಯಂತೆ ಸ್ವಾದೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿರುವ ಸಮಯದಲ್ಲಿ ನಾವೇ ವಾದಿಗಳ ಆಸ್ತಿಗಳನ್ನು ಒತ್ತುವರಿ ಮಾಡಲು ಪ್ರಯತ್ನಪಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಚಕ್ಕುಬಂಧಿಯನ್ನು ಉದ್ದೇಶಪೂರ್ವಕವಾಗಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ವಾದಿಗಳ ವಿರುದ್ಧ ನಾವು ಹೂಡಿರುವ ಅಸಲು ದಾವಾ ಸಂಖ್ಯೆ 376ಃ 2016 ರಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ವಾದಿಗಳ ಆಸ್ತಿ ಚಕ್ಕುಬಂಧಿ ಸರಿ ಇಲ್ಲಾ ಎಂದು ಯಾವುದೇ ಪ್ರಾಧಿಕಾರದಲ್ಲಿ ಪ್ರಶ್ನಿಸದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.